(ಇಂದು ದಿನಾಂಕ 20-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರ ಶ್ರೀಮತಿ ವಿ.ಬಿ.ಜೆ. ವಕೀಲರಿಂದಃ**

ವಾದಿಯ ಕುಟುಂಬದ ಮೂಲ ಪುರುಷ ಸುಕ್ರು ನಾಯ್ಕು ಆಗಿರುತ್ತಾರೆ. ಮೃತ ಸುಕ್ರು ನಾಯ್ಕು ರವರಿಗೆ ಲಿಂಗಪ್ಪ, 1 ಮತ್ತು 2 ನೇ ಪ್ರತಿವಾದಿ ಹಾಗೂ ಬೀರಪ್ಪ ಒಟ್ಟು 4 ಜನ ಮಕ್ಕಳು ಎಂದರೆ ಸರಿ. ನಾನು ದಿಃ 17-07-1978 ರಂದು ಜನಿಸಿರುತ್ತೇನೆ. ನನ್ನ ತಾಯಿಯ ತಂದೆಯ ಮನೆ ಬಾಡಾದ ಜ್ಯೇಶ್ಠಾಪುರದಲ್ಲಿದೆ. ನನ್ನ ತಂದೆಯ ಮನೆಯ ಮಾದರಿ ರಸ್ತೆಯ ಗುಡೇಂಗಡಿಯಲ್ಲಿರುತ್ತದೆ. ನನ್ನ ತಾಯಿಯು ಅವರ ಮದುವೆಯ ನಂತರ ಅವರ ಗಂಡನ ಮನೆಯಲ್ಲಿ ವಾಸ್ತವ್ಯ ಮಾಡಿ ಬಂದಿರುತ್ತಾರೆ ಎಂದರೆ ಸರಿ. ನಾನು ಹುಟ್ಟಿ ಬೆಳೆದದ್ದು ಮಾದರಿ ರಸ್ತೆಯ ಗುಡೇಂಗಡಿಯಲ್ಲಿ. ಬಾಡದ ಜ್ಯೇಷ್ಠಪುರದಿಂದ ಮಾದರಿ ರಸ್ತೆಯ ಗುಡೇಂಗಡಿಗೆ ಸುಮಾರು ಒಂದುವರೆ ಕಿ.ಮೀ. ಅಂತರ ಇರುತ್ತದೆ. ನನ್ನ 8 ನೇ ತರಗತಿ ವರೆಗಿನ ವಿದ್ಯಾಭ್ಯಾಸವು ಬಾಡಾದ ಜನತಾ ವಿದ್ಯಾಲಯದಲ್ಲಿ ಆಗಿರುತ್ತದೆ. ಸುಕ್ರು ನಾಯ್ಕು ರವರಿಗೆ ಒಟ್ಟು 7 ಜನ ಮೊಮ್ಮಕ್ಕಳು ಇರುತ್ತಾರೆ. ಅವರ ಹೆಸರು ಹೇಳಲು ಬರುವುದಿಲ್ಲ. ಅವರು ಈಗಲೂ ಜೀವಂತರಾಗಿರುತ್ತಾರೆ. ಮೃತ ಲಿಂಗಪ್ಪ ನಾಯ್ಕು ರವರಿಗೆ ತಾರಾ, ವಿದ್ಯಾ, ವೀಣಾ ಒಟ್ಟು 3 ಜನ ಹೆಣ್ಣು ಮಕ್ಕಳು.

1 ನೇ ಪ್ರತಿವಾದಿಗೆ ಅನಂತ, ಮಂಗಳ, ಸವಿತಾ ಒಟ್ಟು 3 ಜನ ಮಕ್ಕಳು. ಬೀರಪ್ಪ ನಾಯ್ಕು ರವರ ಹೆಂಡತಿಯ ಹೆಸರು ಮಾದೇವಿ ನಾಯ್ಕು. ಬೀರಪ್ಪ ನಾಯ್ಕು ರವರಿಗೆ ಮಕ್ಕಳು ಇರುವುದಿಲ್ಲ. ನಾನು ಉದಾಹರಣೆ ಹಾಗೂ ನನ್ನ ಮುಖ್ಯ ವಿಚಾರಣೆ ಬರೆಯಲು ಮಾಹಿತಿಯನ್ನು ವಕೀಲರಾದ ಶ್ರೀ, ಉಮಾನಂದ ರವರಿಗೆ ನೀಡಿರುತ್ತೇನೆ. ಈ ದಾವೆಯನ್ನು ಲಿಂಗಪ್ಪ ಸುಕ್ರು ನಾಯ್ಕು ಸಲ್ಲಿಸಿರುತ್ತಾರೆ. ನಾನು ಹಾಗೂ 3 ನೇ ಪ್ರತಿವಾದಿಯವರು ಒಟ್ಟಾಗಿ ಉದಾಹರಣೆಯನ್ನು ಸಲ್ಲಿಸಿರುತ್ತೇವೆ ಎಂದರೆ ಒಟ್ಟಿಗೆ

ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಎಲ್ಲ ಮಾಹಿತಿಯನ್ನು ಲಿಂಗಪ್ಪ ನಾಯ್ಕ ರವರು ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಲಿಂಗಪ್ಪ ನಾಯ್ಕ ರವರು ಯಾವಾಗ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸುಕ್ರು ನಾಯ್ಕ ರವರು ಬೀರಪ್ಪ ನಾಯ್ಕ ರವರು ಮೃತರಾಗುವ ಮೊದಲೇ ಮೃತರಾಗಿರುತ್ತಾರೆ ಎಂದು ಈಗ ಹೇಳಲು ಸಾಧ್ಯವಿಲ್ಲ. ಸುಕ್ರು ನಾಯ್ಕ ರವರು ತೀರಿಹೋದ ನಂತರ ವಾರಸಾ ಅರ್ಜಿಯನ್ನು ಯಾರು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಹಾಲಿ ವಾಸ್ತವ್ಯ ಜ್ಯೇಷ್ಠಾಪುರದಲ್ಲಿ ಇದೆ. ನಾನು ವಾಸವಾಗಿರುವ ಸ.ನಂ. ಹಾಗೂ ಮನೆ ನಂ. ಹೇಳಲು ಸಾಧ್ಯವಿಲ್ಲ. ನನ್ನ ತಂದೆಯಾದ ಜಟ್ಟಿ ಶಿವಪ್ಪ ನಾಯ್ಕ ರವರು 20 ವರ್ಷದ ಹಿಂದೆ ಮೃತರಾಗಿರುತ್ತಾರೆ. ನನ್ನ ತಂದೆಯ ಜೀವಿತಾವಧಿಯಲ್ಲಿ ಹಾಗೂ ಅವರ ಮರಣದ ನಂತರ ನನ್ನ ತಾಯಿಯು ತಂದೆಯ ಮನೆಯ ವಾಸಮಾಡಿಕೊಂಡು ಬಂದಿರುತ್ತಾರೆ.

3 ನೇ ಪ್ರತಿವಾದಿಯ ತಂದೆಯ ಹೆಸರು ಜಟ್ಟಿ ನಾಯ್ಕ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯವರು ಕುಮಟಾ ತಾಲೂಕಿನ ಮೂರುರಿನ ಕರ್ಕಿಮಕ್ಕಿಯಲ್ಲಿ ವಾಸಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿಯು ಅವರು ಬೀರಪ್ಪ ಸುಕ್ರು ನಾಯ್ಕ ರವರ ಮನೆಯಲ್ಲಿ ವಾಸಮಾಡಿಕೊಂಡು ಬರುತ್ತಿದ್ದಾರೆ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ವಾಸಮಾಡಿಕೊಂಡು ಬರುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ತಂದೆಯಾದ ಜಟ್ಟಿ ನಾಯ್ಕ ರವರು ಮೂರುರಿನ ಕರ್ಕಿಮಕ್ಕಿಯಲ್ಲಿ ವಾಸಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಂಜುನಾಥ ಜಟ್ಟಿ ನಾಯ್ಕ ಇವರು ಬೀರಪ್ಪ ನಾಯ್ಕನ ಹೆಂಡತಿಯಾದ ಮಹಾದೇವಿ ಬೀರಪ್ಪ ನಾಯ್ಕ ರವರ ಅಣ್ಣನ ಮಗ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಮಂಜುನಾಥ ಜಟ್ಟಿ ನಾಯ್ಕ ರವರ ವಿದ್ಯಾಭ್ಯಾಸ ಮೂರುರಿನಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಂಜುನಾಥ ಜಟ್ಟಿ ನಾಯ್ಕ ರವರು ಮಹಾದೇವಿ ಬೀರಪ್ಪ ನಾಯ್ಕರವರ ಸಂಬಂಧಿಕರಾಗಿರುವುದರಿಂದ ಅವರ ಮನೆಗೆ ಆಗಾಗ ಬಂದು ಹೋಗುತ್ತಿದ್ದರು ಎಂದರೆ ಸರಿ. ದಾವಾಸ್ತಿಯಲ್ಲಿ ಎಷ್ಟು ಸ.ನಂ. ಗಳಿಗೆ ವಾದಿಯವರ ಹಕ್ಕು

ಕಬ್ಜಾ ಇದೆ ಎಂದು ಹೇಳಲು ಸಾಧ್ಯವಿಲ್ಲ. ದಾವಾಸ್ತಿಯ 3ನೇ ಪರಿಶಿಷ್ಟ ಆಸ್ತಿಯು ವಾದಿಯವರ ಕುಟುಂಬದರಿಗೆ ಸೇರಿದ ಆಸ್ತಿ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ವಾಸ್ತವ್ಯ ಇರುವ ಮನೆಯನ್ನು ನಾನು ಹಾಗೂ ಲಿಂಗಪ್ಪ ನಾಯ್ಕರವರು ಸೇರಿಕೊಂಡು ಕಟ್ಟಿರುತ್ತೇವೆ. ನಾನು ವಾಸವಾಗಿರುವ ಮನೆಯನ್ನು ಕಟ್ಟಿಕೊಳ್ಳುವ ಕಾನೂನು ರೀತಿ ಇರುವ ಎಲ್ಲ ಪ್ರಕ್ರಿಯೆಗಳನ್ನು ನನ್ನ ಮಾವನಾಗಿರುವ ಲಿಂಗಪ್ಪ ನಾಯ್ಕರವರು ನೋಡಿಕೊಂಡಿರುತ್ತಾರೆ. ನಾನು ವಾಸಮಾಡಿಕೊಂಡಿರುವ ಮನೆಯು ವಿದ್ಯಾ ನಾಯ್ಕ ರವರ ಹೆಸರಿನಲ್ಲಿ ಇದೆ. ನಾನು ಲಿಂಗಪ್ಪ ನಾಯ್ಕ ರವರ ಅಳಿಯ. ನಾನು ಖಾಸಗಿ ಕಾರನ್ನು ಬಾಡಿಗೆಗೆ ಚಲಾಯಿಸುತ್ತೇನೆ. ನಮ್ಮ ಮನೆಯ ಪಕ್ಕದಲ್ಲಿ 1 ನೇ ಪ್ರತಿವಾದಿ ಹಾಗೂ ವಾದಿಯ ಮನೆ ಇರುತ್ತದೆ. ನಾನು ವಾಸ್ತವ್ಯ ಮಾಡಿಕೊಂಡು ಬರುತ್ತಿರುವ ಮನೆಯನ್ನು ಸುಮಾರು 6-7 ವರ್ಷಗಳ ಹಿಂದೆ ಲಿಂಗಪ್ಪ ನಾಯ್ಕ ರವರು ಕಟ್ಟಿಸಿರುತ್ತಾರೆ. ಸಾಕ್ಷಿಗೆ 3 ಫೋಟೋಗಳನ್ನು ತೋರಿಸಲಾಗಿ ಸದರಿ ಫೋಟೋಗಳು ಹಾಲಿ ವಾಸ್ತವ್ಯ ಇರುವ ಮನೆಯ ನೆಲಗಟ್ಟಿನ ಸಮಯದಲ್ಲಿ ತೆಗೆದಿರುವ ಫೋಟೋಗಳು ಎಂದು ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಡಿ. 13 ರಿಂದ 15 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನು 3 ಫೋಟೋಗಳನ್ನು ತೋರಿಸಲಾಗಿ ಅವುಗಳು ನಾನು ಹಾಲಿ ವಾಸ್ತವ್ಯ ಇರುವ ಮನೆಯ ಬೇರೆ ಬೇರೆ ಅಂಚಿನಿಂದ ತೆಗೆದ ಫೋಟೋಗಳೆಂದು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಡಿ. 16 ರಿಂದ 18 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನು 2 ಫೋಟೋಗಳನ್ನು ತೋರಿಸಲಾಗಿ ಸದರಿ ಫೋಟೋದಲ್ಲಿ ಕಾಣುವ ಬಾವಿಯು ನಾನು ಹಾಲಿ ವಾಸ್ತವ್ಯ ಇರುವ ಮನೆಯ ಪಕ್ಕದಲ್ಲಿ ಇರುವುದೆಂದು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಡಿ. 19 ಮತ್ತು 20 ಎಂದು ಗುರುತಿಸಲಾಯಿತು. ತಾರಾ ನಾಗರಾಜ ನಾಯ್ಕ ಅವರು ಲಿಂಗಪ್ಪ ನಾಯ್ಕ ರವರ ಕುಟುಂಬಕ್ಕೆ ಸೇರಿರುವ ದಾವಾ ಸ್ಥಳದಲ್ಲಿ 2 ವರ್ಷಗಳಿಂದ ವಾಸ್ತವ್ಯ ಮಾಡಿಕೊಂಡು

ಬಂದಿರುತ್ತಾರೆ. ತಾರಾ ನಾಯ್ಕ ರವರ ಗಂಡ ನಾಗರಾಜ ನಾಯ್ಕ ರವರು ಕೆ ಎಸ್ ಆರ್ ಟಿ ಸಿ ಬಸ್ಸ ಚಾಲಕರಾಗಿರುತ್ತಾರೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ